International Journal of Kannada Research
www.kannadajournal.com

ISSN: 2454–5813
IJKR 2022; 8(4): 49-53
© 2022 IJKR
www.kannadajournal.com
Received: 13-09-2022
Accepted: 15-10-2022

**ಎಂ.ಮನೋಜ್**
ಸಂಶೋಧನಾ ವಿದ್ಯಾರ್ಥಿ
(ಸಮಾಜ ವಿಜ್ಞಾನ ಹಾಗೂ ಮಾನವಿಕ ವಿಭಾಗ)
ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು, ಕರ್ನಾಟಕ, ಭಾರತ

Corresponding Author:
**ಎಂ.ಮನೋಜ್**
ಸಂಶೋಧನಾ ವಿದ್ಯಾರ್ಥಿ
(ಸಮಾಜ ವಿಜ್ಞಾನ ಹಾಗೂ ಮಾನವಿಕ ವಿಭಾಗ)
ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು, ಕರ್ನಾಟಕ, ಭಾರತ

# ವಿಷಯ : ನಾಟಕ ಸಾಹಿತ್ಯದಲ್ಲಿ ಪ್ರಭುತ್ವ ಹಾಗೂ ಯಾಜಮಾನ್ಯತೆ ಪರಿಕಲ್ಪನೆ

**ಎಂ.ಮನೋಜ್**

## ಪೀಠಿಕೆ

ಸಾಹಿತ್ಯದ ಇತರೆ ವಿವಿಧ ಪ್ರಕಾರಗಳು ಶ್ರೀಮಂತವಾಗಿರುವಂತೆ, ಕನ್ನಡದಲ್ಲಿ ನಾಟಕ ಸಾಹಿತ್ಯ ಪ್ರಕಾರವೂ ಶ್ರೀಮಂತವಾಗಿದೆ. ಇದರ ಮೂಲವನ್ನು ಗುರುತಿಸಲು ಹೊರಟರೆ ನಮಗೆ 1680ರ ಸುಮಾರಿನಲ್ಲಿ ಚಿಕ್ಕದೇವರಾಜ ಒಡೆಯರ ಆಸ್ಥಾನದ ಕವಿ ಸಿಂಗರಾರ್ಯನಿಂದ ರಚಿತವಾದ "ಮಿತ್ರಾವಿಂದಾ ಗೋವಿಂದ" ಕನ್ನಡದ ಮೊಟ್ಟಮೊದಲ ನಾಟಕವೆಂದು ಕಂಡುಬರುತ್ತದೆ. ಶ್ರೀಹರ್ಷನಿಂದ ಸಂಸ್ಕೃತದಲ್ಲಿ ರಚಿತವಾದ "ರತ್ನಾವಳಿ" ನಾಟಕದ ಕನ್ನಡ ಅನುವಾದ. ಅನುವಾದವಾದರೂ ಒಂದು ರೀತಿಯಲ್ಲಿ ಸ್ವತಂತ್ರ್ಯ ಕೃತಿಯಾಗಿದ್ದು ನಾಟಕಕಾರ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾನೆ. ಈ ನಾಟಕ ಮೂಲ ರತ್ನಾವಳಿಯಷ್ಟು ತೃಪ್ತಿ ಕೊಡುವುದಿಲ್ಲವಾದರೂ ದೊರೆತ ಕನ್ನಡ ನಾಟಕಗಳಲ್ಲಿ ಮೊದಲನೆ ಯದೆಂಬ ದೃಷ್ಟಿಯಿಂದ ಇದಕ್ಕೆ ಐತಿಹಾಸಿಕ ಮಹತ್ತ್ವವಿದೆ.

## ಉದ್ದೇಶ

ಆಧುನಿಕ ಕನ್ನಡ ನಾಟಕ ಪರಂಪರೆಗೆ ಸುಮಾರು ನೂರು ವರ್ಷಗಳ ಇತಿಹಾಸ ಇದೆ. 19ನೇ ಶತಮಾನದ ಕೊನೆಯಿಂದ ಇಲ್ಲಿಯ ತನಕ ಬೆಳೆದು ಬಂದಿರುವ ಆಧುನಿಕ ಕನ್ನಡ ನಾಟಕಗಳನ್ನು ವಿವಿಧ ನೆಲೆಗಳಲ್ಲಿ ಈಗಾಗಲೇ ಅಧ್ಯಯನ ಮಾಡಲಾಗಿದೆ. ಆಧುನಿಕತೆ ಮತ್ತು ಪರಂಪರೆಯ ನೆಲೆಗಳಲ್ಲೂ ಹಾಗೂ ಸಾತತ್ಯ ನೆಲೆಗಳಲ್ಲೂ ನಾಟಕಗಳನ್ನು ಚರ್ಚಿಸಿಕೊಂಡು ಬರಲಾಗಿದೆ. ಹಾಗೆಯೇ ಕನ್ನಡ ನಾಟಕಗಳನ್ನು ಐತಿಹಾಸಿಕ, ಪೌರಾಣಿಕ, ಸಮಕಾಲೀನ ವಸ್ತುಗಳನ್ನು ಕೇಂದ್ರವಾಗಿಟ್ಟುಕೊಂಡು ಅನೇಕ ಬಗೆಯ ಸಂಶೋಧನೆಗಳು ಸಹ ನಡೆದಿದೆ.

19ನೇ ಶತಮಾನದ ಕೊನೆಯ ವರ್ಷ ಪ್ರಕಟವಾದ ಕರ್ಕಿ ವೆಂಕಟರಮಣ ಶಾಸ್ತ್ರಿಯವರ "ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ"ದಿಂದ 20ನೇ ಶತಮಾನದ ಕೊನೆಯ ಅಕ್ಷರ ಅವರ "ಚೂರಿಕಟ್ಟೆ ಅರ್ಥಾತ್ ಕಲ್ಯಾಣಪುರ" ನಾಟಕದವರೆಗೂ ಸಾಮಾಜಿಕ, ಸಾಂಸ್ಕೃತಿಕ-ವಿಘಟನೆ, ಸಂಸ್ಕೃತಿಯನಿರ್ಮಾಣ, ವಸಾಹತುಶಾಹಿ, ಯಾಜಮಾನ್ಯ, ಅಧಿಕಾರ, ಪ್ರಭಾವ, ಊಳಿಗಮಾನ್ಯ, ನಿಯಂತ್ರಣ ವ್ಯಕ್ತಿತ್ವ ನಿರ್ಮಾಣ, ಅಸ್ತಿತ್ವದ ಹುಡುಕಾಟ, ಗಂಡು ಹೆಣ್ಣಿನ ಸಂಬಂಧಗಳು ಮೊದಲಾದ ವಸ್ತುಗಳ ಹಿನ್ನೆಲೆಯಲ್ಲಿ ಸಮಕಾಲೀನ ಸಮಾಜದ ಸಮಸ್ಯೆಗಳನ್ನು ಕನ್ನಡ ನಾಟಕಗಳು ಶೋಧಿಸುತ್ತ

ಬಂದಿದೆ. ಈ ನೂರು ವರ್ಷಗಳ ಅವಧಿಯಲ್ಲಿ ಸೃಷ್ಟಿಯಾಗಿರುವ ಕನ್ನಡ ನಾಟಕ ಸಾಹಿತ್ಯವನ್ನು ವಸ್ತು ಕೇಂದ್ರವಾಗಿ ವಿಶ್ಲೇಷಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ಈ ನಾಟಕಗಳು ಮಂಡಿಸುವ ಅಧಿಕಾರ ಯಾಜಮಾನ್ಯ ಹಾಗೂ ಪ್ರಭುತ್ವ ಈ ವಸ್ತುಗಳ ಕೃತಿ ಕೇಂದ್ರಿತ ವಿಶ್ಲೇಷಣೆಯ ಜೊತೆಗೆ ಭಾರತೀಯ ಚಿಂತಕರ ಸಿದ್ಧಾಂತಗಳನ್ನು ಹಾಗೂ ಪಾಶ್ಚಾತ್ಯರ ಜಾಗತಿಕ ಚಿಂತಕರ ಸಿದ್ಧಾಂತಗಳನ್ನು ಅಧ್ಯಯನದ ತಾತ್ವಿಕ ಸಾಮಗ್ರಿಯಾಗಿ ಬಳಸಿಕೊಳ್ಳಲಾಗಿದೆ ಕಳೆದ ಐವತ್ತು ವರ್ಷಗಳಲ್ಲಿ ಪ್ರಭುತ್ವದ ವಿವಿಧ ಮುಖಗಳನ್ನು ಯಜಮಾನ್ಯದ ವಿಸ್ತೃತ ವ್ಯಾಪ್ತಿಯನ್ನು ಅಧಿಕಾರ ಕೇಂದ್ರಗಳ ಬಗೆ ಬಗೆಯ ನಿಯಂತ್ರಣಗಳನ್ನು ಈ ಚಿಂತಕರ ಸಿದ್ಧಾಂತಗಳನ್ನು ವಿಭಿನ್ನ ನೆಲೆಗಳಲ್ಲಿ ಗ್ರಹಿಸಲಾಗಿದೆ. ಈ ಕಾಲದ ಜಾಗತಿಕ ಬೌದ್ಧಿಕ ಚಿಂತನೆಯನ್ನು ರೂಪಿಸಿರುವ ಈ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಕನ್ನಡ ನಾಟಕಗಳು ನಿರ್ವಹಿಸಿದ ಮೂರು ವಸ್ತುಗಳನ್ನು ಚರ್ಚಿಸುವುದರಿಂದ ಹೊಸ ನೆಲೆಗಳು ಕಾಣಬಲ್ಲವು ಎಂಬ ಆಶಯ ಈ ಅಧ್ಯಯನದ ಹಿನ್ನೆಲೆಯಲ್ಲಿದೆ.

**ಪ್ರಭುತ್ವ** : ಪ್ರಭುತ್ವ ಎಲ್ಲಾ ಕಾಲದಲ್ಲಿಯೂ ತನ್ನ ಅಧೀನಕ್ಕೆ ಒಳಪಟ್ಟವರ ಮೇಲೆ ವಿವಿಧ ರೀತಿಯಲ್ಲಿ ಅಧಿಕಾರವನ್ನು ಚಲಾಯಿಸುವ ಒಂದು ವ್ಯವಸ್ಥಿತವಾದ ಶಕ್ತಿ. ಮತ್ತೊಂದು ನೆಲೆಯಲ್ಲಿ ಸಮಾಜದ ಬೇರೆ ಬೇರೆ ಪಂಗಡ ಜಾತಿ ವರ್ಗಗಳನ್ನು ನಿಯಂತ್ರಿಸುತ್ತ ತನ್ನ ಶಕ್ತಿಯನ್ನು ಹೆಚ್ಚೆಚ್ಚು ಕೇಂದ್ರೀಕರಿಸಿ ಕೊಳ್ಳುವ ಪ್ರಯತ್ನದಲ್ಲಿ ತೊಡಗುತ್ತದೆ. ಪ್ರಭುತ್ವದ ಅಧಿಕಾರವು ಕೆಲವೊಮ್ಮೆ ನೇರವಾದ ನಿಷ್ಠುರವಾದ ತಂತ್ರಗಳನ್ನು ಬಳಸುತ್ತ ಅಧಿಕಾರವನ್ನು ಹೇರುವುದು ಒಂದು ಬಗೆಯಾದರೆ ಮತ್ತೊಂದು ಬಗೆಯಲ್ಲಿ ಸಮುದಾಯವು ಕರ್ತವ್ಯವನ್ನು ನಿರ್ವಹಿಸ ಬಹುದಾದ ಕ್ರಮಗಳನ್ನು ನಿರ್ದೇಶನಗಳನ್ನು ಆತ್ಮೀಯತೆಯ ಮೂಲಕ ಹಾಗೂ ಒಮ್ಮೊಮ್ಮೆ ವಿರೋಧಿಸ ಲಾಗದ ಒತ್ತಾಯದ ಮೂಲಕ ಹೇರುತ್ತದೆ.

**ಪ್ರಭುತ್ವವನ್ನು ಕುರಿತ ವ್ಯಾಖ್ಯಾನಗಳು**

- **ಅರಿಸ್ಟಾಟಲ್ ಮತ್ತು ಜೀನ್ ಬೋಡಿನ್** ಅವರು ಪ್ರಭುತ್ವ ಕುರಿತು ಮಾಡಿರುವ ವಾದಗಳ ಆಧಾರದ ಮೇಲೆ "ಸಾಮಾನ್ಯ ಉದ್ದೇಶಕ್ಕಾಗಿ ಸಂಘಟಿತವಾಗಿರುವ ಕುಟುಂಬಗಳ ಮತ್ತು ಗ್ರಾಮಗಳ ಸಮೂಹವೇ ಪ್ರಭುತ್ವ" ವಿಚಾರಶಕ್ತಿ ಮತ್ತು ಪರಮಾಧಿಕಾರದ ಆಧಾರದ ಮೇಲೆ ಆಳ್ವಿಕೆ ನಡೆಸುತ್ತದೆ ಎಂದು ಒಂದು ಹಂತದಲ್ಲಿ ವಿವರಿಸಿ ಕೊಳ್ಳಬಹುದಾಗಿದೆ.
- **ಟಿ.ಇ.ಹಾಲೆಂಡ್** "ಒಂದು ನಿರ್ದಿಷ್ಟ ಭೂ ಪ್ರದೇಶದಲ್ಲಿ ಪ್ರತಿಷ್ಠಿತ ಗುಂಪು ಉಳಿದ ವಿರೋಧಿ ಗುಂಪಿನ ಮೇಲೆ ಆಳ್ವಿಕೆ ನಡೆಸಲು ಸಂಘಟಿತವಾದ ಸಮುದಾಯವೇ ಪ್ರಭುತ್ವ" ಎನ್ನುತ್ತಾನೆ.
- **ಎಸ್.ಜೆ.ಲಾಸ್ಕಿ** "ರಾಜ್ಯ ಅಥವಾ ಪ್ರಭುತ್ವ ಎಂದರೆ ಸಮಾಜ ಇದು ಸಮಾಜದಲ್ಲಿನ ವ್ಯಕ್ತಿಗಳ ಅಥವಾ ಗುಂಪುಗಳ ಅಥವಾ ಸಂಸ್ಥೆಗಳ ಮೇಲೆ ಬಲಪ್ರಯೋಗ ಮಾಡುವ ಶಾಸನಬದ್ಧವಾಗದ ಸರ್ವೋಚ್ಚ ಸಂಸ್ಥೆಯಾಗಿದೆ"

ಹೀಗೆ ಪ್ರಭುತ್ವವು ಶಾಂತಿಯಿಂದ ಹಾಗೂ ಅಗತ್ಯ ಬಿದ್ದರೆ ಭಯಹುಟ್ಟಿಸುವ ಸಾಧನಗಳ ಮೂಲಕ ವಿಧೇಯತೆಯನ್ನು ಪಡೆಯುತ್ತಿರುತ್ತದೆ ತನ್ನ ಅಧಿಕಾರವನ್ನು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಹೇರುವ ಸೂಕ್ಷ್ಮಗಳ ಒಳತಂತ್ರಗಳನ್ನು ಬಳಸುತ್ತಿರುತ್ತದೆ. ಆಕರ್ಷಣೆ ಬಹುಮಾನ ಪ್ರಭಾವ ಸುಳ್ಳು ಮೋಸ, ಬುದ್ಧಿಕೌಶಲ್ಯ, ಪ್ರಚೋದನೆ, ಬಲತ್ಕಾರ ಮತ್ತು ನಿರ್ದೇಶನ ಮುಂತಾದವು ಅಧಿಕಾರದ ತಳತಂತ್ರಗಳಾಗಿರುತ್ತವೆ. ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ, ವಿಜ್ಞಾನ, ಲಿಂಗ, ಜಾತಿ, ದೇವರು, ಕುಟುಂಬ ಮೊದಲಾದ ಸಂಸ್ಥೆಗಳು ಅಧಿಕಾರದ ಮೂಲ ನೆಲೆಗಳಾಗಿವೆ.ಈ ಎಲ್ಲವನ್ನೂ ಪ್ರಭುತ್ವವು ತನ್ನ ಉಳಿವಿಗಾಗಿ ಮುಂದುವರಿಕೆಗಾಗಿ ಬೆಳವಣಿಗೆಗಾಗಿ ಹಾಗೂ ಸಮತೋಲನವನ್ನು ಕಾಯ್ದುಕೊಳ್ಳುವುದಕ್ಕಾಗಿ ಬಳಸಿಕೊಳ್ಳುತ್ತದೆ.

ಹಾಗಾಗಿ ಅರಿಸ್ಟಾಟಲ್ ಹೇಳಿರುವಂತೆ ರಾಜಕೀಯ ಜೀವಿಯಾಗಿರುವ ಮನುಷ್ಯನು ತನ್ನ ಹಿತಾಸಕ್ತಿಗಳನ್ನು
ರಕ್ಷಿಸಿಕೊಳ್ಳಲು ತನ್ನ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ತನಗೆ ಬೇಕಾದ ಸಂಘ-ಸಂಸ್ಥೆಗಳನ್ನು ರಚಿಸಿ ಕೊಳ್ಳುತ್ತಾರೆ ಪ್ರಭುತ್ವವು ಅಂತಹ ಸಂಘ ಸಂಸ್ಥೆಗಳಲ್ಲಿ ಒಂದಾಗಿದೆ. ಪ್ರಭುತ್ವದ ಪ್ರಶ್ನೆಯು ಬೇರೆಬೇರೆ ಸಂದರ್ಭಗಳಲ್ಲಿ ಬೇರೆಬೇರೆ ಅರ್ಥಗಳನ್ನು ಕೊಡುತ್ತಿರುತ್ತದೆ. ರಾಜಸತ್ತೆಯ ಪ್ರಭುತ್ವದಲ್ಲಿ ರಾಜನ ಅಂತಿಮ ಅಧಿಕಾರ ವಾಗಿದ್ದು ಈ ವ್ಯವಸ್ಥೆಯಲ್ಲಿ ಅವನನ್ನೇ ಪ್ರತ್ಯಕ್ಷ ದೇವರೆಂದು ಪರಿಭಾವಿಸಲಾಗುತ್ತಿದೆ.

ಈ ರೀತಿಯ ಪರಿಕಲ್ಪನೆಗಳಲ್ಲಿ ರಾಜ್ಯದ ಒಡೆಯನಾದ ರಾಜನು ರಾಜ್ಯದ ನಿಯಮವನ್ನು ತನಗೆ ಬೇಕಾದಂತೆ ರೂಪಿಸುತ್ತಾನೆ ಮತ್ತು ಮುರಿಯುತ್ತಿರುತ್ತಾನೆ. ಇದನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇರುವುದಿಲ್ಲ ಪ್ರಜಾಪ್ರಭುತ್ವದ ಮಾದರಿಯೊಳಗೆ ಪ್ರಭುತ್ವವು ಪ್ರಜೆಗಳ

ಪ್ರತಿನಿಧಿಯ ಹಸ್ತದಲ್ಲಿ ಇರುತ್ತದೆ. ಇಲ್ಲಿ ಪ್ರಜೆಗಳು ಪ್ರಭುತ್ವವನ್ನು ಪ್ರಶ್ನಿಸಬಹುದಾಗಿದೆ.

ರಾಜಪ್ರಭುತ್ವವು ತನ್ನ ಕಾಲದ ರಾಜ್ಯದ ಎಲ್ಲಾ ಮತ ಪಂಥಗಳಿಗೂ ಪೋಷಕವಾಗಿತ್ತು. ಆ ಮೂಲಕ ಅವುಗಳ ಮೇಲೆ ತಮ್ಮ ಪ್ರಭಾವವನ್ನು ಸ್ಥಾಪಿಸಿತ್ತು. ಅನೇಕ ಸಲ ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವ ಗಳೆರಡೂ ಜಂಟಿಯಾಗಿ ಜನಸಮುದಾಯವನ್ನು ಶೋಷಣೆ ಮಾಡುತ್ತಾ ಬಂದವು ಧಾರ್ಮಿಕ ಮುಖಂಡರು ಅಥವಾ ಪುರೋಹಿತಶಾಹಿಗಳು ಹಾಕಿದ ನಿಯಮಗಳೇ ರಾಜಾಜ್ಞೆಗಳಾಗಿದ್ದವು. ಧಾರ್ಮಿಕ ಪ್ರಭುತ್ವ ಮತ್ತು ರಾಜಕೀಯ ಪ್ರಭುತ್ವಗಳು ಚಾತುರ್ವರ್ಣ್ಯ ಪದ್ಧತಿಯ ಅನುಸರಣೆಯಿಂದ ಆರ್ಥಿಕ-ಸಾಮಾಜಿಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ಅಸಮಾನತೆಗಳು ಹಾಗೂ ಸಂಘರ್ಷಗಳಿಗೆ ಕಾರಣವಾಗಿರುವುದನ್ನು ಮಧ್ಯಕಾಲೀನ ಸಮಾಜದಲ್ಲಿ ಕಾಣಬಹುದಾಗಿದೆ.

## ವಸಾಹತುವಾದಿ ಪ್ರಭುತ್ವದ ಸ್ವರೂಪ

ವಸಾಹತುಶಾಹಿ ಪ್ರಭುತ್ವ ಎನ್ನುವುದು ಆಧುನಿಕ ಪಶ್ಚಿಮವು ರೂಪಿಸಿದ ಒಂದು ವಿಶಿಷ್ಟ ಬಗೆಯ ಆಕ್ರಮಣ ವಾದಿ ಸಿದ್ಧಾಂತ. ಇದು ಏಕಕಾಲಕ್ಕೆ ಒಂದು ಪರಕೀಯ ಸಮಾಜದ ರಾಜಕೀಯ ಧಾರ್ಮಿಕ ಹಾಗೂ ಸಾಂಸ್ಕೃತಿಕ ಲೋಕಗಳನ್ನೂ ಒಂದು ಜನಾಂಗದ ಪ್ರಜ್ಞೆಯನ್ನು ಆಕ್ರಮಿಸಿಕೊಳ್ಳಲು ಪ್ರಯತ್ನಿಸಿತು. ಯುರೋಪಿಯನ್ ಪುನರುಜ್ಜೀವನ ಘಟ್ಟ ಹಾಗೂ ಬಂಡವಾಳಶಾಹಿ ಯುಗದ ಆರಂಭದಲ್ಲಿ ರೂಪುಗೊಂಡ ವಸಾಹತುವಾದ ಮೂಲತಃ ಒಂದು ಯಾಜಮಾನ್ಯ ವ್ಯವಸ್ಥೆ ಹಾಗೂ ಒಂದು ನೋಟಕ್ರಮ. ವಸಾಹತುವಾದವು ನಗರೀಕರಣದ ಹೆಸರಿನಲ್ಲಿ ದೇಶಿ ನಾಗರಿಕತೆಗಳನ್ನು ನಿರ್ನಾಮ ಮಾಡಲೆತ್ನಿಸುತ್ತಿರುತ್ತದೆ.

ಧರ್ಮ ಮತ್ತು ಜ್ಞಾನಪ್ರಸಾರದ ಹೆಸರಿನಲ್ಲಿ ಅದು ದೇಶಿ ಜ್ಞಾನ ಮತ್ತು ಧರ್ಮಗಳನ್ನು ಅಧೀನಗೊಳಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತವೆ. ಇಲ್ಲಿ ಅದಕ್ಕೆ ತನ್ನ ಸಂಸ್ಕೃತಿಯ ಹೇರಿಕೆ ಹಾಗೂ ಅದರ ಹಿರಿಮೆಯ ಪ್ರತಿಷ್ಠಾಪನೆಯೇ ಮುಖ್ಯವಾಗಿದೆ. ಇದರ ಮೂಲಕ ವಸಾಹತುವಾದ ದೇಶೀ ಜಾನಪದ ಸಾಂಸ್ಕೃತಿಕ ಮಾದರಿಗಳನ್ನು ಕನಿಷ್ಠಗೊಳಿಸಲು ಯತ್ನಿಸುತ್ತಿರುತ್ತದೆ. ವಸಾಹತುಶಾಹಿ ಆಧುನಿಕ ಪ್ರಭುತ್ವದ ಮುಖ್ಯ ಪರಿಣಾಮವೆಂದರೆ ಅದು ತನ್ನ ಬಹುಮುಖ್ಯ ಆಯ್ಕೆಗಳನ್ನು ಇಲ್ಲವಾಗಿಸಿ ಏಕಮುಖಿ ಆಯ್ಕೆಯ ಅನಿವಾರ್ಯತೆಯನ್ನು ಸೃಷ್ಟಿಸಿತು ಒಂದೇ ನಾಡು ಒಂದೇ ಕುಲ ಭಾಷೆ ಮುಂತಾದ ವಿಚಾರಗಳಲ್ಲಿ ಆಳುವವನ ಮತ್ತು ಆಳಿಸಿಕೊಳ್ಳುವವನ ಏಕಾಕಾರಿ ಮನಸ್ಥಿತಿ ಮತ್ತು ಸಾಂಸ್ಕೃತಿಕ ರಚನೆಯ ಏಕಾಕಾರಿ ಗುಣವು ಇಲ್ಲಿ ಪ್ರಧಾನವಾಯಿತು. ಆಧುನಿಕ ಪ್ರಭುತ್ವ ಆಧುನಿಕ ವಿಜ್ಞಾನಗಳ ಮೂಲಕ ಸೂಕ್ಷ್ಮ ಅಧಿಕಾರದ ರೂಪಗಳನ್ನು ಬಲಪಡಿಸುತ್ತಾ ದಬ್ಬಾಳಿಕೆ ಮತ್ತು ನಿಯಂತ್ರಣದ ಮೂಲಕ ಯಾಜಮಾನ್ಯವನ್ನು ಸ್ಥಾಪಿಸುವುದೇ ವಸಾಹತುವಾದೀ ಪ್ರಭುತ್ವದ ಉದ್ದೇಶವಾಗಿದೆ.

ಜನಸಮುದಾಯದ ಕಲಾಪ್ರಕಾರಗಳು ಭಾಷೆ, ಧರ್ಮ, ಚರಿತ್ರೆ, ಶಿಕ್ಷಣ, ಜಾನಪದ ಮುಂತಾದ ಮೌಲ್ಯಗಳ ಎಲ್ಲವನ್ನೂ ಅಪಮೌಲ್ಯಗೊಳಿಸುತ್ತಾ ಜನಭಾಷೆಗಳ ಮೇಲೆ ಇಂಗ್ಲಿಷ್ ಭಾಷೆಯ ಯಜಮಾನಿಕೆ ತುಂಬಾ ನಿರ್ಣಾಯಕ ಪಾತ್ರವನ್ನು ವಹಿಸಿತ್ತು ಇಂಗ್ಲಿಷ್ ಭಾಷೆ ಹಾಗೂ ಅಕ್ಷರ ಜ್ಞಾನವನ್ನು ಸಂಸ್ಕೃತಿಯ ವಾಹಕವಾಗಿ ಪ್ರತಿಪಾದಿಸಿದರು. ಜನಾಂಗ ಭೇದ ಲಿಂಗಭೇದ ಜಾತಿಭೇದಗಳ ರಾಜಕಾರಣವನ್ನು ಮತ್ತಷ್ಟು ವಿರೂಪಗೊಳಿಸಿ ಜನರಲ್ಲಿ ಮಂಡಿಸಿತ್ತು.ಜನ ಸಮುದಾಯದವರಲ್ಲಿ ಮೌನ, ಭಯ, ಸಿನಿಕತನ, ಹಿಂಜರಿತ, ಅಸ್ತಿತ್ವವಾದಿ, ಯಾತನೆ ಮತ್ತು ಸಾಮಾಜಿಕ ನೆಲೆಯಲ್ಲಿ ಒಂದು ಖಚಿತವಾದ ಚಹರೆ ಇಲ್ಲದ ಸ್ಥಿತಿಗೆ ಜನಸಮುದಾಯವನ್ನು ಆಧುನಿಕ ಪ್ರಭುತ್ವ ದೂಡಿತು. ವಸಾಹತುಶಾಹಿ ಯಜಮಾನಿಕೆಯ ಅನುಭವದ ಸಂಬಂಧದಲ್ಲಿ ಅನ್ಯ ದೇಶಿಯ ಪ್ರಬಲ-ದುರ್ಬಲ, ಮೇಲ್ವರ್ಗ-ಕೆಳವರ್ಗ, ನಗರ-ಕಾಡು, ಜ್ಞಾನ-ಅಜ್ಞಾನ, ನಾಗರಿಕ-ಅನಾಗರಿಕ ಇವುಗಳ ಸಂಘರ್ಷವು ನಡೆಯುತ್ತದೆ.

ವಸಾಹತುಶಾಹಿ ಯಜಮಾನಿಕೆಯ ಹೊಸ ಉತ್ಪಾದನಾ ಸಂಬಂಧಗಳ ಪರಿಣಾಮವಾಗಿ ಪ್ರಕೃತಿಯ ಆರಾಧನೆ ಸಂಪ್ರದಾಯ ಮತ್ತು ನಿಸರ್ಗವನ್ನು ಅಧಿಕಾರ ಉಳ್ಳವರ ವಿರುದ್ಧದ ಪೈಪೋಟಿಯಿಂದಾಗಿ ಒಂದು ಅಸ್ತ್ರವಾಗಿ ಬಳಸಿಕೊಳ್ಳಲಾಯಿತು. ಇದು ದೇಶಿಯ ಅನುಭವವಾಗಿ ಶ್ರದ್ಧೆಯ ಬಿಂಬವಾಗಿ ಮತ್ತು ಅನನ್ಯತೆಯ ಸಂಕೇತವಾಗಿ ರೂಪ ಪಡೆಯಿತು ನವೋದಯದ ಕವಿಗಳು ಪ್ರಕೃತಿಯನ್ನು ಹೊಸ ಅರ್ಥಕ್ಕೆ ಅಳವಡಿಸಿಕೊಂಡರು.

ಉದಾಹರಣೆಗೆ : ನಿಸರ್ಗದ ಶಕ್ತಿ ಹೆಣ್ಣಿನ ಶಕ್ತಿಯಾಗಿ ಅಥವಾ ಸ್ತ್ರೀ ತತ್ವದ ಪ್ರತೀಕವಾಗಿ ಕೊನೆಗೆ ಪುರುಷ ನಿರ್ಮಿತ ಶಕ್ತಿಗಳು ಎದುರು ಒಂದು ಆಯುಧವಾಗಿ ಪರಿಣಮಿಸಿದ್ದನ್ನು ಮುಖ್ಯವಾಗಿ ಕುವೆಂಪು , ಪುತಿನ ಅವರ ನಾಟಕದಲ್ಲಿ ಕಾಣಬಹುದಾಗಿದೆ.

ಆಶೀಶ್ ನಂದಿಯ ಪ್ರಕಾರ ವಸಾಹತುಕಾರನ ಭಾಷೆಯನ್ನು ಬಳಸಲೊಲ್ಲದ ಚರಿತ್ರೆಗಿಂತ ಪುರಾಣಗಳ ಭಾಷೆಯನ್ನು ಬಳಸಿದ ಗಾಂಧಿ ಮಾರ್ಗವೇ ನಿಜವಾದ ನಿರ್ವಸಾಹತೀಕರಣ ಮಾರ್ಗ. ಗಾಂಧೀಜಿಯ ಅಖಂಡ ಪುರುಷತ್ವದ

ಕಲ್ಪನೆ ಅರ್ಧನಾರೀಶ್ವರ ಕಲ್ಪನೆಯಿಂದ ರೂಪಗೊಂಡದ್ದು ಅದು ಸ್ತ್ರೀತ್ವವನ್ನು ಪುರುಷತ್ವವನ್ನು ಒಳಗೊಳ್ಳುವಂಥದ್ದು. ಈ ಅಖಂಡ ಪುರುಷತ್ವ ಅನ್ಯ ಸಂಸ್ಕೃತಿಯನ್ನು ತಿರಸ್ಕರಿಸುವುದು ಮಾತ್ರವಲ್ಲದೆ ದೇಶೀ ಮಾರ್ಗಗಳು ಹಾಗೂ ದೇಶೀ ಸಾಮೂಹಿಕ ದರ್ಶನವನ್ನು ಪ್ರತಿಪಾದಿಸುತ್ತದೆ.

ಆಶೀಶ್ ನಂದಿಯ ಪ್ರಕಾರ ವಸಾಹತುಶಾಹಿ ಪ್ರಭುತ್ವವನ್ನು ಸಮರ್ಥವಾಗಿ ಎದುರಿಸಿದ ಆನಾಧುನಿಕ ಭಾರತ, ಗಾಂಧಿ ಮಾದರಿಯ ಸ್ವ-ವಿಮರ್ಶೆ ಭಾರತ, ಮುಗ್ಧ ಭಾರತ ಕುವೆಂಪು ಬೆರಳ್ಗೆ ಕೊರಳ್ ನಾಟಕದಲ್ಲಿ ಪುರೋಹಿತಶಾಹಿ ಮತ್ತು ರಾಜಶಾಹಿಗಳ ಜಂಟಿ ದಮನದ ವಿರುದ್ಧ ಬಳಸಿರುವ ಅಸ್ತ್ರವೆಂದರೆ ಮುಗ್ಧತೆ ಅಸಹಾಯಕತೆ ಹಾಗೂ ಆಧ್ಯಾತ್ಮ ಅಲ್ಲದೆ ಪುರುಷಾಧಿಕಾರೀ ಪ್ರಭುತ್ವದ ವಿರುದ್ಧ ಮಹಾಕಾಳಿ ರೂಪದ ಸ್ತ್ರೀತ್ವವನ್ನು ಎತ್ತಿಹಿಡಿದಿರುವುದನ್ನು ಗಮನಿಸಬಹುದು. ಅವರ ಜಲಗಾರ ಮತ್ತು ಶೂದ್ರತಪಸ್ವಿ ನಾಟಕಗಳಲ್ಲಿಯೂ ಮೇಲುಜಾತಿಯ ವಿರುದ್ಧ ಸ್ಥಿತಪ್ರಜ್ಞತೆ ಹಾಗೂ ಆಧ್ಯಾತ್ಮವನ್ನು ಅಸ್ತ್ರವಾಗಿ ಬಳಸಿರುವುದನ್ನು ನೋಡುತ್ತೇವೆ. ಗಾಂಧಿಯವರ ಪ್ರತಿಭಟನಾತ್ಮಕ ಮಾದರಿ ಇದು. ಲಂಕೇಶರ ಗುಣಮುಖ ನಾಟಕದಲ್ಲಿ ಹಕೀಮ ಅಲಾವಿಖಾನ್ ಗಾಂಧಿ ಮಾದರಿಯ ಹಿನ್ನಲೆಯಲ್ಲಿ ಸೃಷ್ಟಿಯಾಗಿದ್ದಾನೆ. ಸರ್ವಾಧಿಕಾರದ ಅಹಮಿಕೆಯ ಎದುರು ಮುಗ್ಧನಂತೆ ನಿರ್ಲಿಪ್ತ ನಂತೆ ಅಸಹಾಯಕನಂತೆ ಕಾಣುತ್ತಾ ನಾದಿರ್ ನನ್ನು ಚಿಕಿತ್ಸೆಗೆ ಆತ್ಮವಿಮರ್ಶೆಗೆ ಒಳಪಡಿಸುತ್ತಾನೆ ಹೀಗೆ ಅಹಿಂಸಾತತ್ವ ಹಿಂಸೆಯ ಪ್ರಭುತ್ವವನ್ನು ಮುಖಾಮುಖಿಯಾಗುತ್ತದೆ.

## ಯಾಜಮಾನ್ಯದ ಸ್ವರೂಪ (ಹೆಜಿಮೊನಿ)

ಯಾಕೆ ಮಾನ್ಯ ಎಂಬ ಪರಿಕಲ್ಪನೆಯು ಒಂದು ಬಗೆಯ ಸ್ವ-ಘೋಷಿತ ನೈತಿಕ ಶಕ್ತಿಯಾಗಿದ್ದು. ಶಕ್ತಿಯ ಮೂಲಕವೂ ತನ್ನ ಪ್ರಾಬಲ್ಯ ಹಾಗೂ ನಿಯಂತ್ರಣಗಳನ್ನು ಪ್ರಕಟಿಸುತ್ತಿರುತ್ತದೆ. ಅಧೀನರು ಕೇವಲ ಆಳಿಸಿಕೊಳ್ಳಲು ಮಾತ್ರ ಯೋಗ್ಯರು ಎಂಬ ಧೋರಣೆಯಿಂದಾಗಿ ಯಜಮಾನರು ಆಳ್ವಿಕೆ ಮಾಡಲು ಅರ್ಹರು ಎಂಬ ಗ್ರಹಿಕೆ ವ್ಯಾಪಿಸಿದ್ದನ್ನು ಗುರುತಿಸಬಹುದಾಗಿದೆ. ಈ ತಂತ್ರವು ಸೂಕ್ಷ್ಮವಾದ ಕೌಶಲ್ಯದಿಂದ ನಡೆಯುತ್ತದೆ ಸಂಚು ಮೋಸ ವಂಚನೆ ಹಾಗೂ ಸುಳ್ಳುಗಳ ಮೂಲಕ ತನ್ನ ಅಧೀನಕ್ಕೆ ಒಳಪಟ್ಟ ಅವರನ್ನು ನಿರ್ಬಂಧಿಸುವ ಕಾರ್ಯವಿಧಾನವನ್ನು ಯಾಜಮಾನ್ಯ ರೂಪಿಸಿಕೊಳ್ಳುತ್ತದೆ.

ಈ ಕೆಳಗಿನ ಹಂತಗಳಲ್ಲಿ ಯಾಜಮಾನ್ಯದ ಪ್ರಭಾವವನ್ನು ನಾಟಕಗಳಲ್ಲಿ ಗುರುತಿಸಬಹುದು.

- ಪ್ರಭುತ್ವ ಹಾಗೂ ಯಾಜಮಾನ್ಯ
- ಸಾಂಸ್ಕೃತಿಕ ಯಾಜಮಾನ್ಯ
- ಧರ್ಮ, ಪುರೋಹಿತಶಾಹಿ ಮತ್ತು ಪ್ರಭುತ್ವ
- ಜಾತಿಕೇಂದ್ರಿತ ಯಾಜಮಾನ್ಯ

ಸಂಸರ ನಾಟಕಗಳಲ್ಲಿ ಕಾಣಬರುವ ಅನ್ಯಾಕ್ರಮಣ ರಾಜನಿಷ್ಠೆ ಮತ್ತು ರಾಜದ್ರೋಹ ಅರಮನೆ ಮತ್ತು ತಳಮನೆ, ರಾಜಪ್ರಭುತ್ವ ಮತ್ತು ಪುರೋಹಿತಶಾಹಿ ಯಾಜಮಾನ್ಯಗಳ ಸಂಘರ್ಷ ಹಾಗೂ ಲಿಂಗ ರಾಜಕಾರಣದ ಒಳ ಸಂಘರ್ಷಗಳನ್ನು ಇಲ್ಲಿ ಚರ್ಚಿಸಬಹುದು. ಮಾಸ್ತಿಯವರ ಕಾಕನಕೋಟೆ ನಾಟಕವನ್ನು ಕೇಂದ್ರವಾಗಿರಿಸಿಕೊಂಡು ವಸಾಹತೀಕರಣಕ್ಕೊಳಗದ ಸಮಾಜಗಳ ಒಳಗಿನ ಯಜಮಾನ ಸಂಸ್ಕೃತಿ ಮತ್ತು ಅಧೀನ ಸಂಸ್ಕೃತಿಗಳ ನಡುವೆ ಇದ್ದ ಬಗ್ಗೆ ಸೂಕ್ಷ್ಮ ವೈರುದ್ಯಗಳು ಅಂತರ್ ವಿರೋಧಗಳನ್ನು ಕಾಣಬಹುದು. ಪುತಿನ ಅವರ 'ಅಹಲ್ಯೆ' ನಾಟಕದಲ್ಲಿ ಭೂಮಿಯ ಮೇಲೆ ಸ್ವರ್ಗದ ಭೋಗ ಸಂಸ್ಕೃತಿಯೊಂದರ ಅವಕಾಶವಾದಿ ರಾಜಕಾರಣದ ಒಳ ಸೂಕ್ಷ್ಮಗಳನ್ನ ಗುರುತಿಸಬಹುದು. 'ಗೋಕುಲ ನಿರ್ಗಮನ' ನಾಟಕದಲ್ಲಿ ಕಾಡಿನ ಸಮುದಾಯವೊಂದು ಮುಕ್ತ ಗ್ರಾಮ ಜಗತ್ತಿನಿಂದ ನಗರಕೇಂದ್ರಿತ ಯಾಜಮಾನ್ಯದ ಕಡೆಗೆ ಪಲ್ಲಟಗೊಳ್ಳುತ್ತಿರುವ ಸಾಂಸ್ಕೃತಿಕ ಬಿಕ್ಕಟ್ಟಿನ ಸ್ಥಿತಿಯನ್ನು ಗ್ರಹಿಸಬಹುದು. ಭಾರತೀಯ ಸಮಾಜದಲ್ಲಿ ಜಾತಿ ವರ್ಣ ಹಾಗೂ ಜ್ಞಾನಾಧಾರಿತ ಅಧಿಕಾರ ಕೇಂದ್ರಗಳು ಸಾಧಿಸಿದ ನಿಯಂತ್ರಣವನ್ನು ಕುವೆಂಪುರವರ ಜಲಗಾರ ಶೂದ್ರ ತಪಸ್ವಿ ಬೆರಳ್ಗೆ ಕೊರಳ್ ನಾಟಕಗಳ ಹಿನ್ನೆಲೆಯೊಳಗೆ ಕಾಣಬಹುದಾಗಿದೆ.

ಸರ್ವಾಧಿಕಾರಿ ಪ್ರಭುತ್ವದ ಆಕ್ರಮಣ ಹಾಗೂ ಸರ್ವಾಧಿಕಾರಿಯೊಬ್ಬನ ಒಳಹೊರಗುಗಳ ಸಂಘರ್ಷ ಹಾಗೂ ಆತ್ಮ ಶೋಧನೆಗಳ ಚಿತ್ರಣವನ್ನು ಗಿರೀಶ್ ಕಾರ್ನಾಡರ "ತುಘಲಕ್" ಮತ್ತು ಲಂಕೇಶರ "ಗುಣಮುಖ" ನಾಟಕದಲ್ಲಿ ಗುರುತಿಸಬಹುದು. ಲಂಕೇಶರ "ಸಂಕ್ರಾಂತಿ" ಗಿರೀಶ್ ಕಾರ್ನಾಡರ "ತಲೆದಂಡ" ಮತ್ತು ಶಿವಪ್ರಕಾಶ್ ಅವರ "ಮಹಾಚೈತ್ರ" ನಾಟಕಗಳು ಶೋಧಿಸಿರುವ 12ನೇ ಶತಮಾನದ ಶರಣ ಚಳುವಳಿ ವರ್ಣಸಂಕರ ಹಾಗೂ ಧಾರ್ಮಿಕ ರಾಜಕೀಯ ಸಾಂಸ್ಕೃತಿಕ ಸಂಘರ್ಷಗಳನ್ನು ಸಮಕಾಲೀನ ಹಿನ್ನೆಲೆಯಲ್ಲಿ ವಿಶ್ಲೇಷಿಸಬಹುದು. ಚಂದ್ರಶೇಖರ್ ಕಂಬಾರರ "ಜೋಕುಮಾರಸ್ವಾಮಿ" ನಾಟಕದಲ್ಲಿ ಉಳಿಗಮಾನ್ಯ ಪ್ರಭುತ್ವ, ಕ್ರೌರ್ಯ, ಲೈಂಗಿಕ ರಾಜಕಾರಣ ಹಾಗೂ ಜನಸಮುದಾಯದ

ವಿದ್ರೋಹದ ನೆಲೆಗಳನ್ನು ಗುರುತಿಸಬಹುದು.

## ಸಮಾರೋಪ

ಕನ್ನಡ ನಾಟಕ ಪರಂಪರೆಯ ಸ್ವತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಘಟ್ಟಗಳಲ್ಲಿ ಪ್ರಭುತ್ವ ಯಾಜಮಾನ್ಯ ಹಾಗೂ ಅಧಿಕಾರ ಕೇಂದ್ರ ಮೂರು ವಸ್ತುಗಳು ವಿಭಿನ್ನ ಬಗ್ಗೆ ನೆಲೆಗಳ ಕಾಣಬಹುದು ಎಂಬುದನ್ನು ತಿಳಿಸಲಾಗಿದೆ ಹಾಗೂ ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳಾದಂತಹ ನವೋದಯ, ನವ್ಯ, ದಲಿತ, ಬಂಡಾಯ, ಕಾಲಘಟ್ಟಗಳಲ್ಲಿ ವಿಭಿನ್ನ ತಾತ್ವಿಕ ಪ್ರೇರಣೆಗಳು ಸಹ ಕಾರಣವಾಗಿದೆ. ಅವು ಸಂಸ ಕುವೆಂಪು ಪುತಿನ ಮಾಸ್ತಿ ಗಿರೀಶ್ ಕಾರ್ನಾಡ್ ಲಂಕೇಶ್ ಶಿವಪ್ರಕಾಶ್ ಮುಂತಾದ ಎಲ್ಲಾ ನಾಟಕಕಾರರು ಸಾಮಾನ್ಯವಾಗಿ ಐತಿಹಾಸಿಕ ಹಾಗೂ ಪೌರಾಣಿಕ ಭಿತ್ತಿಯಲ್ಲಿ ವಸ್ತುಗಳನ್ನು ಶೋಧಿಸಿರುವುದು ಕುತೂಹಲಕಾರಿಯಾಗಿದೆ. ಸೂಕ್ಷ್ಮವಾಗಿ ನಾವು ಗಮನಿಸಿದಾಗ ವಸಾಹತುಶಾಹಿಯ ನೇರ ವಿಮರ್ಶೆಗಿಂತ ವಸಾಹತುಶಾಹಿಯ ಅಧಿಕಾರ ಧೋರಣೆಗಳನ್ನು ನಾಟಕದ ಒಳಗೆ ಪ್ರಶ್ನೆ ಮಾಡಿರುವುದು ಕಂಡುಬರುತ್ತದೆ. ಅದರ ಜೊತೆಗೆ ಕುವೆಂಪು ಭಾರತೀಯ ಸಮಾಜದ ಒಳಗಿನ ದೌರ್ಬಲ್ಯಗಳನ್ನು ವಿಮರ್ಶೆಯನ್ನು ತಮ್ಮ ಕೃತಿಗಳಲ್ಲಿ ಮಾಡಿರುವುದನ್ನು ಕಾಣುತ್ತೇವೆ.ಸಂಸರು ಭಯ-ಸಂಶಯ ಮತ್ತು ಆತಂಕಗಳಿಂದ ಪ್ರಭುತ್ವವನ್ನು ನೋಡಿದ್ದಾರೆ ಬ್ರಿಟಿಷರು ಪ್ರಭುತ್ವ ಸಾಧಿಸಿದ್ದು ಹಾಗೂ ದೌರ್ಜನ್ಯ ನಡೆಸಿದ್ದು ದೇಶಿ ದೌರ್ಬಲ್ಯಗಳಿಂದ ಎಂಬುದು ಅವರ ನಾಟಕಗಳು ತೋರಿಸುತ್ತವೆ.

ಪುತಿನ ಅವರು ಪ್ರಭುತ್ವವನ್ನು ಒಂದು ಲೀಲೆ ಎಂಬಂತೆ ನೋಡಿದ್ದಾರೆ. ವಸಹತುಶಾಯಿ ವ್ಯವಸ್ಥೆಯ ಒಳಗಡೆಯೇ ಇದ್ದು ಸಾಮ್ರಾಜ್ಯಶಾಹಿಯನ್ನು ವಿಮರ್ಶಿಸಲು ಅವರ ಪ್ರಯತ್ನಿಸಿರುವರು.

ಹೀಗೆ ಕನ್ನಡ ನಾಟಕಕಾರರು ಪೌರಾಣಿಕ ವಸ್ತು ಮತ್ತು ಪೌರಾಣಿಕ ಭಿತ್ತಿ ಅಥವಾ ಐತಿಹಾಸಿಕ ವಸ್ತು ಮತ್ತು ಐತಿಹಾಸಿಕ ಭಿತ್ತಿಯ ಮೂಲಕ ಪ್ರಭುತ್ವ ಯಾಜಮಾನ್ಯ ಮತ್ತು ಅಧಿಕಾರ ಕೇಂದ್ರಗಳನ್ನು ನೋಡುವ ಗ್ರಹಿಸುವ ಮುಖಾಮುಖಿಯಾಗುವ ಬಗೆಯನ್ನು ನಾಟಕಗಳಲ್ಲಿ ಪರಿಣಾಮಕಾರಿಯಾದ ಅಂತಹ ಅಂಶವಾಗಿದೆ. ಈ ಹಿನ್ನೆಲೆಯೊಳಗೆ ಭಾಷಿಕ ರಚನಾ ವಿಧಾನಗಳು, ಸಾಂಸ್ಕೃತಿಕ ಅಧಿಕಾರದ ರಚನೆಗಳ ನಡುವೆ ಇರುವ ಸಂಬಂಧ ಹಾಗೂ ವೈರುಧ್ಯಗಳನ್ನು ಗುರುತಿಸಬಹುದು. ಒಟ್ಟಾರೆಯಾಗಿ ಪ್ರಭುತ್ವ ಯಾಜಮಾನ್ಯ ಅಧಿಕಾರ ಈ ವಸ್ತುಕೇಂದ್ರಿತ ಅಧ್ಯಯನವು ಯಾಜಮಾನ್ಯ ಪ್ರಭುತ್ವ ಹಾಗೂ ಅಧಿಕಾರ ಕೇಂದ್ರಗಳ ಸ್ವರೂಪವು ಕಾಲದಿಂದ ಕಾಲಕ್ಕೆ ಬದಲಾಗುವ ರೀತಿಯನ್ನೂ ಹಾಗೂ ಅಧಿಕಾರ ಕೇಂದ್ರಗಳಿಗೆ ಜನಸಮುದಾಯಗಳ ಪ್ರತಿಕ್ರಿಯೆಯನ್ನೂ ಈ ಕಾಲದ ಮುಖ್ಯ ತಾತ್ವಿಕ ಚಿಂತನೆಗಳು ಹಾಗೂ ಆಧುನಿಕ ಕನ್ನಡ ನಾಟಕಗಳಲ್ಲಿಯೂ ವಿವಿಧ ರೂಪಕಗಳನ್ನು ಗುರುತಿಸಬಹುದಾಗಿದೆ.

## ಪರಾಮರ್ಶನ ಗ್ರಂಥಗಳು


- ಕನ್ನಡ ಸಾಹಿತ್ಯ ವಾಹಿನಿ – ತುಷಾರ ಮಾಸಿಕ ಪುಸ್ತಕ – ೧೯೯೩ ಪ್ರಕಟಣೆ
- ಸಾಹಿತ್ಯ ಕಥನ- ಡಿ.ಆರ್. ನಾಗರಾಜ್
- ಆಶೀಶ್ ನಂದಿ ವಿಚಾರಗಳು- ಕೆ.ವಿ. ಸುಬ್ಬಣ್ಣ
- ಸಾಹಿತ್ಯ ಮತ್ತು ಪ್ರಭುತ್ವ( ಕರ್ನಾಟಕ ಸಾಹಿತ್ಯ ಅಕಾಡೆಮಿ)- ಬರಗೂರುರಾಮಚಂದ್ರಪ್ಪ
- ಯಾಜಮಾನ್ಯ ಸಂಕಥನ – ಡಾ. ಟಿ.ವೆಂಕಟೇಶ್ ಮೂರ್ತಿ
- ಮಾರ್ಕ್ಸ್ ಗಾಂಧಿ ಮತ್ತು ಸಮಾಜವಾದ ರಾಮ ಮನೋಹರ ಲೋಹಿಯಾ ಬರಹಗಳು - ನಟರಾಜ್ ಹುಳಿಯಾರ್ (ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ)